ಶೂನ್ಯ ವೇಳೆಯಲ್ಲಿ ಕೊಡುವುದಾದರೆ ಆಗಲೇ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:- ಯಾವುದು ನಿಮ್ಮ ಚಾಮರಾಜನಗರದ ಕುಡಿಯುವ ನೀರಿನ ವಿಷಯವೆ? ಆಗಲೇ ಒಪ್ಪಿಕೊಂಡ್ರಲ್ಲ ಮುಖ್ಯಮಂತ್ರಿಗಳು. ಇನ್ನು ಕೇಳುವುದೇನಿದೆ? ಆಮೇಲೆ ತೆಗೆದುಕೊಳ್ಳೋಣ, ಈ ಪ್ರಶ್ನೆಯಲ್ಲಿ ಬೇಡ.

ಶ್ರೀ ಪಾಟಾಳ್ ನಾಗರಾಜ್:- ಈ ಪ್ರಶ್ನೆಯಲ್ಲಿ ಬೇಡ ಅಂದರೆ ಆಮೇಲೆ ಕೇಳುತ್ತೇನೆ. ಶೂನ್ಯ ವೇಳೆಯಲ್ಲಿ ತಮ್ಮ ಗಮನ ಸೆಳೆಯುತ್ತೇನೆ.

ವಿಷಯ:- ಹರಿಜನ ಓಣಿಗಳಲ್ಲಿ ಸಮುದಾಯ ಭವನ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 63 (580)

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕಮಲಾಪುರ ಕ್ಷೇತ್ರದಲ್ಲಿ ಹರಿಜನ ಓಣಿಗಳಿಗೆ ಸಮುದಾಯ ಭವನ ನಿರ್ಮಿಸುವ ಯೋಜನೆ ಎಷ್ಟು ಗ್ರಾಮಗಳಲ್ಲಿ ಆಗಿದೆ, ಇನ್ನೂ ಎಷ್ಟು ಬಸದಿಗಳಿಗೆ ಆಗಬೇಕಾಗಿದೆ, ಹಾಗೂ ಇವುಗಳನ್ನು ಪೂರ್ತಿಗೊಳಿಸಲಾಗುವುದು?

ಆ) ಇಂತಹ ಯೋಜನೆಗಳಿರುವ ಕಡೆಯಲ್ಲಿ ಎಷ್ಟು ಗ್ರಾಮಗಳಿಗೆ ಕಲರ್ ಟಿ.ವಿ. ವಿತರಿಸಲಾಗಿದೆ, ಹಾಗೂ ಇನ್ನು ಎಷ್ಟು ಟಿ.ವಿ.ಯನ್ನು ವಿತರಿಸಬೇಕಾಗಿದೆ? (ವಿವರ ನೀಡುವುದು)

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಹರಿಜನರ ಓಣಿಗಳಿಗೆ ಅಥವಾ ಬಸದಿಗಳಿಗೆ ಸಮುದಾಯ ಭವನ ನಿರ್ಮಿಸುವ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ. ಆದ್ದಾಗ್ಯೂ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿ ಕ್ಷೇತ್ರಕ್ಕೆ ಒಂದರಂತೆ, 3.00 ಲಕ್ಷಗಳ ವೆಚ್ಚದಲ್ಲಿ ಮಿನಿ ಅಂಬೇಡ್ಕರ್ ಭವನ ನಿರ್ಮಾಣ ಯೋಜನೆಯನ್ನು ಸರ್ಕಾರವು ಅನುಷ್ಠಾನಗೊಳಿಸುತ್ತಿದೆ. ಕಮಲಾಪುರ ಕ್ಷೇತ್ರದಲ್ಲೂ ಒಂದು ಅಂಬೇಡ್ಕರ್ ಭವನ ನಿರ್ಮಿಸಲು ಸರ್ಕಾರಿ ಆದೇಶ ಸಂಖ್ಯೆ:ಸಕಇ 400 ಪಕವಿ 94 ದಿನಾಂಕ:29-12-95ರಲ್ಲಿ ಆದೇಶಿಸಲಾಗಿದೆ. ಈ ಭವನದ ಕಾಮಗಾರಿಯನ್ನು ಆದಷ್ಟು ಬೇಗ ಕೈಗತ್ತಿಕೊಳ್ಳಲು, ಕ್ರಮ ಕೈಗೊಳ್ಳಲಾಗುವುದು.

ಶ್ರೀ ರೇವುನಾಯಕ್ ಬೆಳಮಗಿ:- ನಾನು ಕೇಳಿರುವುದು ಸಮುದಾಯ ಭವನದ ಬಗ್ಗೆ ಆದರೆ ಅವರು ಉತ್ತರ ಒದಗಿಸಿರುವುದು, ಹರಿಜನ ಓಣಿ ಅಥವಾ ಬಸ್ತಿಗಳಿಗೆ ಸಮುದಾಯ ಭವನ ನಿರ್ಮಾಣ ಯೋಜನೆ ಸರ್ಕಾರದ ಮುಂದಿಲ್ಲ, ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮಿನಿ ಅಂಬೇಡ್ಕರ್ ಭವನ ನಿರ್ಮಾಣ ಯೋಜನೆಯನ್ನು ಸರ್ಕಾರ ಅನುಷ್ಠಾನಗೊಳಿಸಲಾಗಿದೆ. ಕಮಲಾಪುರ ಮತಕ್ಷೇತ್ರದಲ್ಲಿ ಒಂದು ಅಂಬೇಡ್ಕರ್ ಭವನ ನಿರ್ಮಿಸಲು ಸರ್ಕಾರ ಆದೇಶಿಸಲಾಗಿದೆ. ಆದೇಶದ ಸಂಖ್ಯೆ 400.94 ದಿನಾಂಕ

29-12-95....

ಅಧ್ಯಕ್ಷರು:- ತಮಗೆ ಏನು ಬೇಕು ಕೇಳಿ.

ಶ್ರೀ ರೇವು ನಾಯಕ್ ಮೆಳಮಗಿ:- ನಾನು ಕೇಳುತ್ತಿರುವುದು ಹರಿಜನ ಬಸ್ತಿಗಳಿಗೆ ಸಮುದಾಯ ಭವನ. ಏಕೆಂದರೆ ಹರಿಜನರು ದಲಿತರು ಏನಿದ್ದಾರೆ ಅವರಿಗೆ ಮನೆಗಳು ಇರುವುದಿಲ್ಲ, ಟೆಂಪರರಿ ಮನೆಗಳು ಇರುತ್ತವೆ... ಆದರೆ....

ಅಧ್ಯಕ್ಷರು:- ಅಲ್ಲಿ ಸಮುದಾಯ ಭವನದ ಅಗತ್ಯ ಇದೆ ಎಂದು ಕೇಳಬೇಕು.

ಶ್ರೀ ರೇವುನಾಯಕ್ ಬೆಳಮಗಿ:- ಮನೆಯಲ್ಲಿ 4-5 ಜನ ಇದ್ದರೆ, 4-5 ಪರದೆ ಹಾಕಿಕೊಂಡಿರುತ್ತಾರೆ. ಪ್ರತಿಯೊಂದು ಹರಿಜನ ಓಣಿಗೆ ಒಂದು ಸಮುದಾಯ ಭವನ ಆದರೆ, ಕೊನೇಪಕ್ಷ ಅವರು ಉಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದವರು ದಲಿತರ ಬಗ್ಗೆ ಏನು ಚಿಂತನೆ ಮಾಡುತ್ತಿದ್ದಾರೆ? ಸಮಾಜ ಕಲ್ಯಾಣ ಇಲಾಖೆಯವರು ಈ ಚಿಂತನೆ ಮಾಡಬೇಕು. ಮತ್ತೊಂದು ವಿಷಯ, ಟಿ.ವಿ. ಸಲುವಾಗಿ ಕೇಳಿದ್ದೇನೆ. ಪ್ರತಿಯೊಂದು ಕ್ಷೇತ್ರದ ಹಳ್ಳಿಗಳಲ್ಲಿ ಬಹಳಷ್ಟು ಯುವಕರು ಟಿ.ವಿ. ಕೇಳುತ್ತಿದ್ದಾರೆ. ಆದರೆ ಹಿಂದಿನ ಶಾಸಕರು ಟಿ.ವಿ. ಕೊಟ್ಟರೂ ಕೂಡ, ನಮ್ಮಲ್ಲಿ ಸಮುದಾಯ ಭವನ ಇಲ್ಲ ಅದಕ್ಕೆ ಕೇಳಿಲ್ಲ. ಈಗ ನಾವು ದಲಿತರು ಕೂಲಿಗಾರರು ಕೂಡಿ ಒಂದು ಸಮುದಾಯ ಭವನ ನಿರ್ಮಾಣ ಮಾಡಿದ್ದೇವೆ; ಟಿ.ವಿ. ಕೊಡಬೇಕೆಂದು ಕೇಳುತ್ತಿದ್ದೇವೆ. ಈಗಾಗಲೇ ವಾರ್ತಾ ಇಲಾಖೆಯಿಂದ 2-3 ಟಿ.ವಿ. ಒಂದೊಂದು ಕ್ಷೇತ್ರಕ್ಕೆ ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ಕ್ಷೇತ್ರಕ್ಕೂ ತಕ್ಷಣ ಟಿ.ವಿ. ಕೊಡಿಸಬೇಕು. ಸರ್ಕಾರ ದಲಿತರ ಬಗ್ಗೆ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- 1996ರಲ್ಲಿ ಅಂಬೇಡ್ಕರ್ ಜನ್ಮ ಶತಾಬ್ದಿ ಸಂದರ್ಭದಲ್ಲಿ ಸರ್ಕಾರ ಒಂದು ವಿಶೇಷ ಕಾರ್ಯಕ್ರಮ ಹಾಕಿಕೊಂಡಿದೆ. ಆಗ 12500 ಜನ ಇರತಕ್ಕ ಕ್ಷೇತ್ರಕ್ಕೆ ಒಂದು ಸಮುದಾಯ ಭವನ ಕಟ್ಟಬೇಕೆಂಬುದು ಆಜ್ಞೆಯಾಗಿದೆ. ಸರ್ಕಾರ ಮತ್ತೊಂದು ಆದೇಶದಲ್ಲಿ ಈಗ ಸಧ್ಯಕ್ಕೆ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಒಂದು ಅಂಬೇಡ್ಕರ್ ಭವನ ಕಟ್ಟಬೇಕೆಂದು ಆದೇಶ ಹೊರಡಿಸಿ ಈಗಾಗಲೇ ಅದಕ್ಕೆ ನೂರು ಕೋಟಿ ರೂಪಾಯಿ ಹಣ ತೆಗೆದಿಟ್ಟಿದೆ.

ಅಧ್ಯಕ್ಷರು:- ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ ಕಮ್ಯುನಿಟಿ ಸೆಂಟರ್ ಬಿಲ್ಡಿಂಗ್ ಎಂದು ಮಾಡುತ್ತೀರಲ್ಲ ಅವುಗಳನ್ನು ಪರಿಶಿಷ್ಟ ಜಾತಿ ಜನ ವಾಸ ಮಾಡುವ ಕಡೆ ಕಟ್ಟಿದರೆ, ಅದನ್ನು ಕಮ್ಯುನಿಟಿ ಪರ್ಪಸ್‌ಗೆ ಉಪಯೋಗಿಸಿಕೊಳ್ಳುತ್ತಾರೆ. ಅದು ಒಳ್ಳೆಯ ಸಲಹೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಶಾಸಕರು ಯಾವ ಜಾಗ ತೋರಿಸುತ್ತಾರೆ ಅಲ್ಲಿ ನಾವು ಕಟ್ಟುತ್ತೇವೆ. ಪ್ರತಿಯೊಂದು ಹೊಸದಾಗಿ ಕೇಳಿದರೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು:- ವಾರ್ತಾ ಇಲಾಖೆಯವರಿಗೆ ಹೇಳಿ ಟಿ.ವಿ. ಕೊಡಿಸಿ.

ಮಾಲೀಕಯ್ಯ ಗುತ್ತೇದಾರ್:- ಟಿ.ವಿ.ಯನ್ನು ಒಟ್ಟಿಗೆ ಎಲ್ಲಾ ತಾಲ್ಲೂಕುಗಳಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಬಜೆಟ್ ಪ್ರಕಾರ ಕೇವಲ ಟಿ.ವಿ.ಗಳನ್ನು 3-4 ಕೊಡಬಹುದು. ಮಾನ್ಯ ಸದಸ್ಯರು ಎಲ್ಲಿ ಹೇಳುತ್ತಾರೆ ಅಲ್ಲಿ ಕೊಡುತ್ತೇವೆ.

ಅಧ್ಯಕ್ಷರು:- ಅವರಿಗೆ ಒಂದು ಕೊಡಿ.

ಒಬ್ಬ ಮಾನ್ಯ ಸದಸ್ಯರು:- ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ವರ್ಷಕ್ಕೆ ಒಂದು ಕೊಡುತ್ತೇವೆಂದು ಹೇಳುತ್ತಾರೆ. ಹರಿಜನ ಕೇರಿಗೆ ಕೊಡುವುದನ್ನು ಹೆಚ್ಚಿಗೆ ಮಾಡಿ.

ಮಾಲೀಕಯ್ಯ ಗುತ್ತೇದಾರ್:- ವಾರ್ತಾ ಇಲಾಖೆಯಿಂದ ಏನು ಕೊಡುತ್ತಿದ್ದಾರೆ. ಅದನ್ನು ನಮ್ಮ ಇಲಾಖೆಯ ಮೂಲಕ ಕಳುಹಿಸುತ್ತೇವೆ.

ಅಧ್ಯಕ್ಷರು:- ಮಾನ್ಯ ಸದಸ್ಯರು ಹೇಳುವುದು ಒಳ್ಳೆಯ ಸಲಹೆ. ಒಂದೊಂದು ಏಕೆ ಕೊಡುತ್ತೀರಿ 4-4 ಆದರೂ ಕೊಡಿ ಎಂದು ಹೇಳುತ್ತಾರೆ.

(4-5 ಜನ ಮಾನ್ಯ ಸದಸ್ಯರು ಪ್ರಶ್ನೆ ಕೇಳಲು ನಿಂತರು)

ಅಧ್ಯಕ್ಷರು:- ಬಹಳ ಜನ ಎದ್ದು ನಿಲ್ಲುತ್ತಾರಲ್ಲ ಪ್ರಶ್ನೋತ್ತರ ವೇಳೆಯಲ್ಲಿ. You are a senior man. You can afford to sit.

ಶ್ರೀ ಸಿ.ಆರ್.ಸಗೀರ್ ಅಹಮದ್:- ಉತ್ತರದಲ್ಲಿ ಏನು ಹೇಳುತ್ತಾರೆಂದರೆ ಟಿ.ವಿ. ಸೆಟ್‌ಗಳನ್ನು ಒದಗಿಸುವ ಕಾರ್ಯಕ್ರಮ ಇರುವುದಿಲ್ಲ ಎಂದು ಹೇಳುತ್ತಾರೆ. ಆದುದರಿಂದ.....

ಅಧ್ಯಕ್ಷರು:- ನೀವು ಮಂತ್ರಿಯಾಗಿದ್ದವರು, ಈ ರೀತಿ ಎಲ್ಲದಕ್ಕೂ ಆಕ್ಷೇಪಣೆ ಮಾಡಬಾರದು. You should understand the entire context. ಈಗತಾನೇ ಮಾಲೀಕಯ್ಯ ಗುತ್ತೇದಾರ್ ಅವರು ಕ್ಲಾರಿಫೈ ಮಾಡಿದರು. ಇದು ನಮ್ಮ ಇಲಾಖೆಯಿಂದ ಕೊಡುವುದಿಲ್ಲ, ವಾರ್ತಾ ಇಲಾಕೆಯಿಂದ ಕೊಡಿಸಿಕೊಡುತ್ತೇವೆಂದರು.

ಶ್ರೀ ಪ್ರಕಾಶ್ ಹುಕ್ಕೇರಿ:- ಪ್ರತಿ ವಿಧಾನಸಭಾ ಕ್ಷೇತ್ರದ್ಲಲಿ 40-50 ಹಳ್ಳಿಗಳು ಬರುತ್ತವೆ, ಒಂದೊಂದು ಕಡೆ 108 ಹಳ್ಳಿಗಳು ಬರುತ್ತವೆ. ಅವರು ಕೊಡುವುದು ಸಾಲುತ್ತಿಲ್ಲ, ಜಾಸ್ತಿ ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ರಮೇಶ್ ಜಿಗಜಿಣಗಿ:- ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ಅಪ್ಪಣೆ ಕೊಟ್ಟರೆ ನಾನು ಕ್ಲಾರಿಫಿಕೇಷನ್ ಹೇಳುತ್ತೇನೆ. ನಾನು ಹಿಂದೆ ಸಮಾಜ ಕಲ್ಯಾಣ ಮಂತ್ರಿಯಾಗಿದ್ದಾಗ ಹಿಂದಿನ ಸರ್ಕಾರ ಸುಮಾರು 2 ಕೋಟಿ ರೂಪಾಯಿ ಟಿ.ವಿ.ಖರೀದಿ ಮಾಡಬೇಕೆಂದು ಒಂದು ಪ್ರಸ್ತಾವನೆ ನನ್ನ ಇಲಾಖೆಯಲ್ಲಿ ಇತ್ತು. ಆದರೆ ಆ ಪ್ರಸ್ತಾವನೆ ಬಂದಮೇಲೆ, ಇವರು ಟಿ.ವಿ ಎನ್ನುತ್ತಾರಲ್ಲ ಸಮಾಜ ಕಲ್ಯಾಣ ಇಲಾಖೆಗೆ ಎಂದು ನಾನು ನಮ್ಮ ಬಜಾಪುರ ಜಿಲ್ಲೆಯಲ್ಲಿ ಹಿಂದೆ ಎಲ್ಲೆಲ್ಲಿ ಕೊಟ್ಟಿದ್ದಾರೆಂದು ಲಿಸ್ಟ್ ತರಿಸಿ ನೋಡಿದೆ. ನನ್ನ ಕ್ಷೇತ್ರದಲ್ಲಿ ಹಿಂದೆ 9 ಟಿ.ವಿ.ಗಳನ್ನು ಸಮಾಜ ಮಂದಿರಗಳಿಗೆ ಕೊಟ್ಟಿದ್ದರು. ಅದರ

ಲಿಸ್ಟ್ ತರಿಸಿ ಒಬ್ಬ ಹುಡುಗನಿಗೆ ಕೊಟ್ಟು ಕಳುಹಿಸಿದೆ. ನೀನು ಹೋಗಿ ಎಲ್ಲೆಲ್ಲಿ ಸಮಾಜ ಮಂದಿರಗಳು ಇವೆ ಅಲ್ಲಿ ಟಿ.ವಿ.ಗಳು ಇವೆಯೇ ನೋಡಿಕೊಂಡು ಬಾ ಎಂದು ಹೇಳಿದೆ. ದಯವಿಟ್ಟು ಯಾರೂ ತಪ್ಪು ಭಾವಿಸಬಾರದು 9 ಟಿವಿ.ಗಳಲ್ಲಿ ಒಂದೇ ಒಂದು ಟಿ.ವಿ. ಕಮ್ಯುನಿಟಿ ಹಾಲಿನಲ್ಲಿ (ಅಂಬೇಡ್ಕರ್ ಭವನದಲ್ಲಿ) ಮುರಿದು ಬಿದ್ದಿತ್ತು. ಆ ಹುಡುಗ ಹೋಗಿ ಉಳಿದ 8 ಟಿ.ವಿ. ಎಲ್ಲಿವೆ ಎಂದರೆ ಅವರ ಮನೆಯಲ್ಲಿವೆ, ಇವರ ಮನೆಯಲ್ಲಿವೆ ಎಂದು ಹೇಳಿದ. ಈ ವಿಚಾರ ತಿಳಿದು ಬಂದಮೇಲೆ ಎರಡು ಕೋಟಿ ರೂಪಾಯಿ ಟಿ.ವಿ. ಖರೀದಿ ಏನು ಮಾಡಬೇಕಾಗಿತ್ತು, ಅವನ್ನು ಮಾಡಿದರೆ ಪುನಃ ದುರುಪಯೋಗವಾಗುತ್ತದೆಂದು ತೀರ್ಮಾನ ಮಾಡಿ, ಆದೇ 2 ಕೋಟಿ ರೂಪಾಯಿಗಳಲ್ಲಿ ಅಂಬೇಡ್ಕರ್ ಭವನಗಳನ್ನು ಕಟ್ಟಬೇಕೆಂದು ನಾನು ಆರ್ಡರ್ ಮಾಡಿಸಿ ಅಂಬೇಡ್ಕರ್ ಭವನಗಳನ್ನು ಹೆಚ್ಚು ಕಡಿಮೆ ಎಲ್ಲ ಶಾಸಕರ ಕ್ಷೇತ್ರಗಳಲ್ಲಿ ಒಂದೊಂದು ಕಟ್ಟಿದ್ದೇವೆ. ಆದ್ದರಿಂದ, ಟಿ.ವಿ. ಕೊಡುವುದರಿಂದ ದುರುಪಯೋಗವಾಗುತ್ತದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಬೇರೆ ಕ್ಷೇತ್ರದಲ್ಲಿ ಹೀಗೆ ಆಗಿದೆಯೆ? (ಗೊಂದಲ)

ಶ್ರೀ ರಮೇಶ್ ಜಿಗಜಿಣಗಿ:- ಸಮಾಜ ಕಲ್ಯಾಣ ಇಲಾಖೆಯ ದುಡ್ಡು ನಿಮಗೆ ಬೇಡ, ಬೇಕಾದರೆ ವಾರ್ತಾ ಇಲಾಖೆಯವರು ಕೊಂಡು ಕೊಡಲಿ, ಅದಕ್ಕೆ ನಮ್ಮ ತಕರಾರು ಇಲ್ಲ, ಎಸ್‌ಪಿಡಿ ಹಣದಲ್ಲಿ ಖರೀದಿ ಮಾಡಬೇಕೆಂದು ಇತ್ತು, ಅದು ಸರಿಯಲ್ಲ. ವಾರ್ತಾ ಇಲಾಖೆಯವರು ಖರೀದಿ ಮಾಡಿ ಕೊಟ್ಟಲ್ಲಿ ನಮ್ಮ ತಕರಾರು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ವಾರ್ತಾ ಇಲಾಖೆಯಿಂದ ಏತಕ್ಕೆ ಖರೀದಿ ಮಾಡಬೇಕು ಎಷ್ಟು ಜನ ಹರಿಜನ ಕೇರಿಯಲ್ಲಿ ಟಿ.ವಿ.ಗಳನ್ನು ಇಟ್ಟುಕೊಂಡಿದ್ದಾರೆಂದು ದಯವಿಟ್ಟು ಹೇಳಬೇಕು.

ಶ್ರೀ ರಮೇಶ್ ಜಿಗಜಿಣಗಿ:- ಸಮಾಜ ಕಲ್ಯಾಣ ಇಲಾಖೆಯಿಂದ ಬೇಡ ಎಂದು ಹೇಳಿದೆ. ವಾರ್ತಾ ಇಲಾಖೆಯವರು ಕೊಂಡುಕೊಡಲಿಕ್ಕೆ ನಮ್ಮ ತಕರಾರು ಇಲ್ಲ. ಎಸ್‌ಪಿಡಿ. ಹಣದಲ್ಲಿ ಅದನ್ನು ಏತಕ್ಕೆ ಕೊಂಡುಕೊಡುತ್ತಾರೆಂದು ನನ್ನ ವಾದ ಅಷ್ಟೆ.

11.40 ಎ.ಎಂ.

ಶ್ರೀ ಕಾಗೋಡು ತಿಮ್ಮಪ್ಪ:- ಏತಕ್ಕೆ ಬೇಡ? ಹರಿಜನ ಕೇರಿಯಲ್ಲಿ ಎಷ್ಟು ಮನೆಯವರು ಟಿ.ವಿ. ಕೊಳ್ಳತಕ್ಕ ಯೋಗ್ಯತೆ ಅಥವಾ ಆರ್ಥಿಕ ವ್ಯವಸ್ಥೆ ಹೊಂದಿದ್ದಾರೆ?

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಮಂತ್ರಿಗಳು ಟಿ.ವಿ.ಗೆ ವಿರೋಧ ಇಲ್ಲ. ಎಸ್.ಸಿ.ಪಿ. ಹಣವಲ್ಲಿ ಅಂಬೇಡ್ಕರ್ ಭವನ ಕಟ್ಟಬೇಕು ಎಂದು ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅಂಬೇಡ್ಕರ್ ಭವನಕ್ಕೆ ಪ್ರೆಯಾರಿಟಿ ಕೊಟ್ಟಿದ್ದಾರೆ. ತಪ್ಪೇನಿದೆ ಅದರಲ್ಲಿ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಾರ್, ಆ ಮಂತ್ರಿಗಳು ನಮ್ಮ ಜಿಲ್ಲೆಗೆ ಬರಲಿ.

ಪ್ರತಿಯೊಂದು ಹರಿಜನ ಕಾಲೋನಿಗೆ ಕೊಟ್ಟಿರುವ ಟಿ.ವಿ.ಯನ್ನು ಎಷ್ಟು ಚೆನ್ನಾಗಿ ಇಟ್ಟುಕೊಂಡಿದ್ದಾರೆ ಮೈಂಟೇನ್ ಮಾಡುತ್ತಿದ್ದಾರೆ ಎಂಬುದನ್ನು ತೋರಿಸುತ್ತೇವೆ. ಎಲ್ಲಿ ದುರುಪಯೋಗವಾಗುತ್ತಿಹೆ. ಅಲ್ಲಿ ಇಲಾಖೆಯ ಮೂಲಕ ಬಿಗಿ ಮಾಡಲಿ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಲ್ಲದರಲ್ಲೂ ದುರುಪಯೋಗವಾಗುತ್ತದೆ ಎಂದು ಹರಿಜನಗಿರಿಜನರಿಗೆ ಕೊಡುವ ಎಲ್ಲಾ ಸೌಲಭ್ಯಗಳನ್ನೂ ನಿಲ್ಲಿಸಿಬಿಡುತ್ತೀರೇನು? ಸರ್ಕಾರ ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ಹರಿಜನ ಗಿರಿಜನ ಕಾಲೋನಿಗಳಿಗೆ ಟಿ.ವಿ. ಕೊಡುವುದನ್ನು ಮುಂದುವರೆಸಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು):- ಶ್ರೀಮಾನ್ ರಮೇಶ್ ಜಿಗಜಿಣಗಿಯವರು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯವರ ಬೀದಿಗಳಲ್ಲಿ ಟಿ.ವಿ. ಕೊಡುವ ಕಾರ್ಯಕ್ರಮಕ್ಕೆ 2 ಕೋಟಿ ರೂ. ಕೊಡಬೇಕೆಂದು ನನ್ನ ಹತ್ತಿರ ಪ್ರಸ್ತಾವನೆ ಬಂದಿತ್ತು. ಅವರು ಏನು ಹೇಳಿದರು....

ಅಧ್ಯಕ್ಷರು:- ಅದು ನನಗೆ ಗೊತ್ತಾಯಿತು. ಸಿದ್ಧರಾಮಯ್ಯನವರೇ ನಾನು ಏನು ಹೇಳುತ್ತೇನೆ ಅಂದರೆ ಅದು ಟಿ.ವಿ. ವಿಚಾರ ಆಗಲೀ, ಹಾಸ್ಟೆಲ್‌ನಲ್ಲಿ ಹಣ ದುರುಪಯೋಗ ಆಗುವ ವಿಚಾರವಾಗಲೀ, ಎಲ್ಲಿ ದುರುಪಯೋಗ ಮಾಡುತ್ತಾರೆ ಆ ಅಪೀಷಿಯಲ್ಸ್ ಮೇಲೆ ತಕ್ಷಣ ಆಗಿಂದಾಗ್ಗೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿ ಅವರನ್ನು ಪೋಲೀಸರಿಗೆ ಹ್ಯಾಂಡ್ ಓವರ್ ಮಾಡಿ ಅವರಿಗೆ ಹ್ಯಾಂಡ್ ಕಪ್ ಹಾಕಿದ ಫೋಟೋವನ್ನು ವಾರ್ತಾ ಇಲಾಖೆಯವರ ಮೂಲಕ ಪತ್ರಿಕೆಗಳಲ್ಲಿ ಪ್ರಚಾರ ಮಾಡಿಸಿ ಜನರಿಗೆಲ್ಲಾ ಇವರು ಬಸಳ ದೊಡ್ಡ ಮನುಷ್ಯರು ಎಂದು ಪರಿಚಯ ಮಾಡಿಸಿ. ಆಗ ಯಾವನೂ ಆ ಕೆಲಸ ಮಾಡುವುದಿಲ್ಲ. ಸಮಾಜಕಲ್ಯಾಣ ಇಲಾಖೆಯಲ್ಲಾಗಲೀ ಯಾವುದೇ ಇಲಾಖೆಯಲ್ಲಾಗಲಿ. ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿ.

ಶ್ರೀ ಸಿದ್ಧರಾಮಯ್ಯ:- ತಮ್ಮ ಸಲಹೆ ಬಹಳ ಸೂಕ್ತವಾಗಿದೆ ಅಧ್ಯಕ್ಷರೆ. ಅದನ್ನು ಮಾಡಲೇಬೇಕು. ಯಾರು ದುರುಪಯೋಗ ಮಾಡುತ್ತಾರೆ ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇಟ್ಟಿರತಕ್ಕ ಹಣವನ್ನು ಯಾವುದೇ ಅಧಿಕಾರಿ ದುರುಪಯೋಗ ಮಾಡಿದರೆ, ಅದು ಅತ್ಯಂತ ಘೋರ ಅಪರಾಧ. ಅಂಥ ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಹ್ಯಾಂಡ್‌ಕಪ್ ಹಾಕಿ ಮೆರವಣಿಗೆ ಮಾಡಿಸಬೇಕು ಎನ್ನುವ ಬಗ್ಗೆ ನಮ್ಮದೇನೂ ತಕರಾರಿಲ್ಲ. ಅದನ್ನು ಮಾಡಿಸಬೇಕು.

ಅಧ್ಯಕ್ಷರು:- ಅದನ್ನು ಮಾಡಿಸಿ. ತಕರಾರಿಲ್ಲ. ನಾನು ಹೇಳುತ್ತೇನೆ ತೊಂದರೆಯಾದರೂ ಚಿಂತೆ ಇಲ್ಲ. ಮೂರು ನಾಲ್ಕು ಜನರಿಗೆ ಹಾಗೆ ಮಾಡಿಸಿ. ನೀವು ಮಾಡಿದ್ದೀರಿ. ನಾನು ನಿಮಗೆ ಕಾಂಪ್ಲಿಮೆಂಟ್ ಮಾಡುತ್ತೇನೆ. ಅಗ್ರಿಕಲ್ಚರ್ ಮಿನಿಸ್ಟರ್ ಮಾಡಿದ್ದಾರೆ ಅದನ್ನು.

ಶ್ರೀ ಸಿದ್ಧರಾಮಯ್ಯ:- ಜಿಗಜಿಣಗಿಯವರು ಹೇಳಿದ್ದು ಏನೆಂದರೆ ಎಸ್.ಸಿ.ಪಿ. ಹಣ ಹೆಚ್ಚಾಗಿ ಇರಿಗೇಷನ್‌ಗೆ, ಹೌಸಿಂಗ್‌ಗೆ, ಅಂಬೇಡ್ಕರ್ ಭವನಗಳನ್ನು ಕಟ್ಟಲಿಕ್ಕೋಸ್ಕರವಾಗಿ

ಮತ್ತೆ ಶಾಲೆಗಳನ್ನು ಕಟ್ಟುವುದಕ್ಕೋಸ್ಕರ ಪ್ರಿಯಾರಿಟಿ ಕೊಡೋಣ ಎಂದು ಅವತ್ತು ತೀರ್ಮಾನ ಮಾಡಿದರು. ಟಿ.ವಿ. ಕೊಡಬಾರದು ಎಂಬ ಅಭಿಪ್ರಾಯ ಅಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಟಿ.ವಿ. ಕೊಡಬೇಡಿ ಎಂದು ನಾನು ಆರ್ಡರ್ ಮಾಡಿದ್ದೇನೆ, ತೀರ್ಮಾನ ತೆಗೆದುಕೊಂಡಿದ್ದೇನೆ ಎಂದು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಿದರು.

ಶ್ರೀ ರಮೇಶ್ ಜಿಗಜಿಣಗಿ:- ಎಸ್.ಸಿ.ಪಿ. ಅಮೌಂಟ್‌ನಲ್ಲಿ ಬೇಡ ಎಂದು ಹೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ:- ಎಸ್.ಸಿ.ಪಿ. ಹಣವನ್ನು ಒಂದು ಕಡೆ ಪೂಲ್ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅದರಿಂದ ಅನುಕೂಲವಾಗಬೇಕು ಎನ್ನುವ ಕಾರಣಕ್ಕೋಸ್ಕರ ಇರಿಗೇಷನ್, ಎಜುಕೇಷನ್, ಹೌಸಿಂಗ್‌ಗೆ ಪ್ರಿಯಾರಿಟಿ ಮಾಡಿಕೊಂಡು, ಇದಕ್ಕೆ ಹಣ ಖರ್ಚು ಮಾಡಬೇಕು ಎನ್ನುವಂಥ ತೀರ್ಮಾನ ಮಾಡಿದ್ದರು. ಟಿ.ವಿ. ಕೊಡಬಾರದು ಎಂಬ ಅಭಿಪ್ರಾಯ ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- 50 ಕೋಟಿ ರೂಪಾಯಿಗಳ ಹಣವನ್ನು ಕ್ರೋಡೀಕರಣ ಮಾಡಿತ್ತು. ಆ 50 ಕೋಟಿ ರೂಪಾಯಿಗಳಲ್ಲಿ ಎರಡು ಕೋಟಿ ರೂಪಾಯಿಗಳನ್ನು ಇಟ್ಟು ಪ್ರತಿಯೊಂದು ಶಾಸನಸಭಾ ಕ್ಷೇತ್ರಕ್ಕೆ 4 ಟಿ.ವಿ.ಗಳಂತೆ ಕೊಡಬೇಕು ಎಂದು ತೀರ್ಮಾನ ಆಗಿತ್ತು. ಅದು ಕ್ಯಾಬಿನೆಟ್ ತೀರ್ಮಾನ ಕೂಡ ಆಗಿದೆ. ಅದೇ ರೀತಿಯಾಗಿ ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಅಂಬೇಡ್ಕರ್ ಭವನ ಕಟ್ಟುವುದಕ್ಕೋಸ್ಕರ 5 ಕೋಟಿ ರೂಪಾಯಿಗಳನ್ನು ಇಟ್ಟಿತ್ತು. ಕ್ಯಾಬಿನೆಟ್ ತೀರ್ಮಾನ ಆಗಿ ಸರ್ಕಾರದ ಆರ್ಡರ್ ಆಗಿ ಕೊಳ್ಳುವ ವಿಚಾರದಲ್ಲಿ ಒಂದು ಕಮಿಟಿಯನ್ನು ಏನೋ ಮಾಡಿತ್ತು. ಆ ಹಣದಲ್ಲಿ ನಾಲ್ಕು ನಾಲ್ಕು ಟಿ.ವಿ. ಕೊಟ್ಟಿದ್ದರೆ ಏನು ಗಂಟು ಹೋಗುತ್ತಿತ್ತು ಅದರಿಂದ? ಏನು ಎರಡು ಕೋಟಿ ರೂಪಾಯಿ ಉಳಿಸಿಕೊಳ್ಳುವುದರಿಂದ ಎಲ್ಲಾ ಹರಿಜನರಿಗೆ ನೀರಾವರಿ, ಎಲ್ಲಾ ಹರಿಜನ ಕೇರಿಗೆ ಅಂಬೇಡ್ಕರ್ ಭವನ ಮಾಡುವುದಕ್ಕಾಗುತ್ತದೆಯೇ? ಇವತ್ತು ದೇಶದಲ್ಲಿ ಬದಲಾವಣೆಯಾಗುತ್ತಿದೆ. ನಾಲ್ಕು ಹರಿಜನ ಕೇರಿಗೆ ನಾಲ್ಕು ಟಿ.ವಿ. ಇಟ್ಟರೆ ಅದರಿಂದ ಏನಾಗುತ್ತದೆ?

ಶ್ರೀ ರಮೇಶ್ ಜಿಗಜಿಣಗಿ:- ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ನಾನು ಹೇಳಿದ್ದುದು ಅರ್ಥ ಆಗದೇ ಅವರಿಗೆ ಕನ್‌ಫ್ಯೂಸ್ ಆಗಿದೆ. ನಾನು ಹೇಳಿದ್ದುದು ಇವರು 50 ಕೋಟಿ ರೂಪಾಯಿ ಪೂಲಿಂಗ್ ಮಾಡುವುದು ನಿಜ. ನಾನು ಹೇಳಿದ್ದು ಅರ್ಥ ಮಾಡಿಕೊಳ್ಳುತ್ತಿಲ್ಲ. ಸ್ಪೆಷಲ್ ಕಾಂಪೊನೆಂಟ್ ಸ್ಕೀಂ ಇರುವುದು ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಅಪ್‌ಲಿಫ್ಟ್‌ಮೆಂಟ್‌ಗೋಸ್ಕರ. ನನ್ನ ವಾದ ಏನು? ಎಸ್.ಸಿ.ಪಿ. ಅಮೌಂಟ್ ಏನು ಪೂಲಿಂಗ್ ಮಾಡಿ ಖರ್ಚು ಮಾಡುತ್ತಾರೆ ಅದನ್ನು ಇಂಥದ್ದಕ್ಕೆ ಖರ್ಚುಮಾಡುವುದು ಬೇಡ ಅಂತ ನನ್ನ ವಾದ. ಆ ಹಣವನ್ನು ಇರಿಗೇಷನ್, ಎಜುಕೇಷನ್ ಮತ್ತು ಹೌಸಿಂಗ್‌ಗೆ ಪ್ರಿಯಾರಿಟಿ ಮೇಲೆ ಖರ್ಚು ಮಾಡೋಣ ಅಂತ. ಟಿ.ವಿ.

ತೆಗೆದುಕೊಳ್ಳುವುದು ಬೇಡ ಅಂತ ಹೇಳಲಿಲ್ಲ. ಎಸ್.ಸಿ.ಪಿ. ಅಮೌಂಟನಲ್ಲಿ ಟಿ.ಪಿ. ಖರೀದಿ ಮಾಡಬೇಡಿ ಎಂದು ನನ್ನ ಮಾದ ಹೇಳಿಕೆ ಅಧ್ಯಕ್ಷರೆ.

ಶ್ರೀ ಕಾಗೋಡು ತಿಮ್ಮಪ್ಪ:- ಬೇರೆ ಹಣ ಕೊಡಿಸಿ.

ಅಧ್ಯಕ್ಷರು:- ಆಯಿತು. ಬೇರೆ ಹಣ ಉಪಯೋಗಿಸುವುದಕ್ಕೆ ವ್ಯವಸ್ಥೆ ಮಾಡಿಸಿ.

ಶ್ರೀ ವೈ.ರಾಮಕೃಷ್ಣ:- ನಾನು ಹೇಳುತ್ತಿರುವುದು 23-12-1995ರಲ್ಲಿ ಈ ಒಂದು ಗೌರ್ನಮೆಂಟ್ ಆರ್ಡರ್‌ನಲ್ಲಿ ನೀವು ಸ್ಯಾಂಕ್ಷನ್ ಮಾಡಿದ್ದೀರಿ. ಇದರಲ್ಲಿ ಏನು ಬರೆದಿದ್ದೀರಿ? ಭವನ ಕಾರ್ಯವನ್ನು ಆದಷ್ಟು ಬೇಗ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದು. ಭೂಮಿ ಸಿಕ್ಕಿದೆಯೆ? ಎಂ.ಎಲ್.ಎ. ಯವರನ್ನು ಎಲ್ಲಿ ಕಟ್ಟಬೇಕು ಅಂತ ಕೇಳಿದ್ದೀರಾ? ಅವರೇನಾದರೂ ಸಲಹೆ ಪಡೆದಿರಾ? ಹರಿಜನ ಕಾಲೋನಿಯಲ್ಲಿ ಕಟ್ಟಿದ್ದೀರಾ? ಕಟ್ಟಿದ್ದರೆ ಯಾವ ಮಟ್ಟದಲ್ಲಿದೆ ಎನ್ನುವ ವಿವರಗಳನ್ನು ಕೊಡಿ.

ಅಧ್ಯಕ್ಷರು:- ಕಳುಹಿಸಿಕೊಡುತ್ತಾರೆ. ಕಮಲಾಪುರಕ್ಕೆ ಸಂಬಂಧಪಟ್ಟಂತೆ ಪರ್ಟಿಕ್ಯುಲರ್ಸ್ ಕಳುಹಿಸಿಕೊಡಿ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಅಧ್ಯಕ್ಷರೆ, ಗೌರ್ನಮೆಂಟ್ ಆರ್ಡರ್ ಆಗಿರುವುದು, ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಅಂಬೇಡ್ಕರ್ ಭವನ ಕೊಡಬೇಕು ಎಂದು ತೀರ್ಮಾನ ಆಗಿದೆ. ಪ್ರತಿಯೊಂದು ಕೇರಿಯಲ್ಲೂ ಕಟ್ಟಿಸುವುದಕ್ಕೆ ಸಾಧ್ಯ ಇಲ್ಲ, ಪ್ರತಿಯೊಂದು ಕ್ಷೇತ್ರದ ಶಾಸಕರು ದಯಮಾಡಿ ಕಳುಹಿಸಿದರೆ ಅದನ್ನು ಕಟ್ಟಿಸುತ್ತೇವೆ.

ಶ್ರೀ ವೈ.ರಾಮಕೃಷ್ಣ:- ಇದು ಕಮಲಾಪುರಕ್ಕೆ ಸಂಬಂಧಪಟ್ಟಿದ್ದುದು.

ಅಧ್ಯಕ್ಷರು:- ಕಮಲಾಪುರಕ್ಕೆ ಸಂಬಂಧಪಟ್ಟಂತೆ ವಿವರವನ್ನು ನಾನು ತರಿಸಿಕೊಡುತ್ತೇನೆ.

ವಿಷಯ:- ಬೆಂಗಳೂರಿನ ಹೊಸ ಸರ್ಕಾರಿ ವಿದ್ಯುತ್ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 64 (583)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರಿನ ಹೊಸ ಸರ್ಕಾರಿ ವಿದ್ಯುತ್ ಕಾರ್ಖಾನೆಯ ನಷ್ಟವನ್ನು ಅನುಭವಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಅನುಭವಿಸಿರುವ ನಷ್ಟದ ಪ್ರಮಾಣವೆಷ್ಟು ಹಾಗೂ